ಓಎಸ್ 246/2022

ಪಿಡಬ್ಲ್ಯೂ 2

**ಸಾಕ್ಷಿಯು ದಿಃ 11.11.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 5ನೇ ಪ್ರತಿವಾದಿ ಪರ ವಕೀಲರಿಂದ**

ನಾನು ಪಿಯುಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಸಿದ್ಧಪಡಿಸಲು ಯಾರು ಮಾಹಿತಿ ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು ಕರಾರು ಆದ ಸಮಯದಲ್ಲಿ ನನಗೆ ಪರಿಚಯವಾಗಿರುತ್ತಾರೆ. ವಾದಿ ನನ್ನ ಸ್ನೇಹಿತರಾಗಿರುತ್ತಾರೆ. ಕರಾರು ಆದ ದಿನಾಂಕದಂದು ವಾದಿಯು ನನ್ನನ್ನು ಕರೆದುಕೊಂಡು ಹೋಗಿದ್ದರು. ಕರಾರು ಆದ ಸಮಯದಲ್ಲಿ ಯಾರು ಯಾರು ಹಾಜರಿದ್ದರು ಎಂದರೆ ಸಾಕ್ಷಿಯು 1 ರಿಂದ 3ನೇ ಪ್ರತಿವಾದಿಗಳು, ಮತ್ತೊಬ್ಬರು ಮಹದೇವಮ್ಮ ಹಾಗೂ ಪಾಪಶೆಟ್ಟಿರವರು ಹಾಜರಿದ್ದರು ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ನಾನು ಹಾಜರಿದ್ದ ಸಮಯದಲ್ಲಿಯೇ ಟೈಪ್ ಮಾಡಿದ್ದು ಅದನ್ನು ಓದಿ ನಾನು ಸಹಿ ಮಾಡಿದ್ದೇನೆ. ಯಾವ ಸರ್ವೆ ನಂಬರ್ ನ ಜಮೀನಿಗೆ ಸಂಬಂಧಿಸಿದಂತೆ, ಎಷ್ಟು ವಿಸ್ತೀರ್ಣದ ಆಸ್ತಿಗೆ ಸಂಬಂಧಿಸಿದಂತೆ ನಿಪಿ 1 ಕರಾರು ಪತ್ರವಾಗಿದೆ ಎಂದು ನನಗೆ ಗೊತ್ತಿಲ್ಲ.

2. ಕರಾರು ಪತ್ರದ ಆಸ್ತಿಯು ಎಷ್ಟು ಹಣಕ್ಕೆ ಮಾತುಕತೆಯಾಗಿತ್ತು ಮೊದಲೇ ಮಾತುಕತೆಯಾಗಿತ್ತಾ ಎಂದರೆ ಸಾಕ್ಷಿಯು ಮೊದಲೇ ಒಂದು ದಿದಿನ ಮಾತುಕತೆಯಾಗಿತ್ತು, ಆ ದಿನ ಮಾತುಕತೆಯ ಬಗ್ಗೆ ಕರಾರು ಪತ್ರವಾಗಿರುತ್ತದೆ ಎಂದು ನುಡಿಯುತ್ತಾರೆ. ಕರಾರು ಪತ್ರದ ಆಸ್ತಿಯನ್ನು 5 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಲು ನಿಗದಿಯಾಗಿತ್ತು. 1 ಎಕರೆಗೆ 5 ಲಕ್ಷದಂತೆ ಮಾತುಕತೆಯಾಗಿತ್ತಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆ ಪೈಕಿ ಎಷ್ಟು ಹಣ ಆ ದಿನ ಕೊಟ್ಟರು ಎಂದರೆ ಸಾಕ್ಷಿಯು 1 ಲಕ್ಷದ 50 ಸಾವಿರ ರೂಪಾಯಿಯ ಡಿಡಿ

ಕೊಟ್ಟರು ಮತ್ತು 50 ಸಾವಿರ ರೂಪಾಯಿ ನಗದನ್ನು ಕರಾರಿನ ದಿನ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 1 ಲಕ್ಷದ 50 ಸಾವಿರ ರೂಪಾಯಿಯ ಡಿಡಿ ಮತ್ತು 50 ಸಾವಿರ ರೂಪಾಯಿ ನಗದನ್ನು ಕೊಟ್ಟಿರುವುದಾಗಿ ಬರೆದಿಲ್ಲ ಆದರೆ 2 ಲಕ್ಷ ರೂಪಾಯಿ ಕೊಟ್ಟಿರುವುದಾಗಿ ಬರೆಸಿದ್ದೇನೆ. ಸದರಿ ಡಿಡಿ ಮತ್ತು ರೂ. 50 ಸಾವಿರ ನಗದನ್ನು 1ನೇ ಪ್ರತಿವಾದಿ ಮಹದೇವಮ್ಮ ರವರಿಗೆ ಕೊಟ್ಟಿರುತ್ತಾರೆ. ಆ ದಿನ ನಾನು ನಿಪಿ 1 ಕರಾರಿಗೆ ಸಾಕ್ಷಿಯಾಗಿ ಸಹಿ ಹಾಕಿದನ್ನು ಬಿಟ್ಟು ಬೇರೆ ಯಾವ ದಾಖಲೆಗೆ ಸಹಿ ಹಾಕಿರುವುದಿಲ್ಲ. ಉಳಿಕೆ ಹಣವನ್ನು ಯಾವಾಗ ಕೊಡಬೇಕೆಂದು ಬರೆಸಿದ್ದರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ನಾನು ಕರಾರನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

3. ಸಾಕ್ಷಿ ಪ್ರಮಾಣ ಪತ್ರದಲ್ಲಿ 1 ಎಕರೆ 26 ಗುಂಟೆ ಪೈಕಿ 16 ½ ಗುಂಟೆ ಕ್ರಯದ ಒಪ್ಪಂದವಾಗಿದೆ ಎಂದು ತಿಳಿಸಿದ್ದು ನಿಪಿ 1 ಕರಾರು ಪತ್ರದಲ್ಲಿ 1 ಎಕರೆ 26 ಜಮೀನಿನ ಪೈಕಿ ಅರ್ಧ ಭಾಗಂಶಕ್ಕೆ ಅಂದರೆ 33 ಗುಂಟೆಗೆ ಕರಾರು ಪತ್ರವಾಗಿರುವುದಾಗಿ ನಮೂದಾಗಿದ್ದು, ಯಾವುದು ಸರಿ ಎಂದರೆ ಸಾಕ್ಷಿಯು ಮಹದೇವಮ್ಮ ರವರು ತಾವು ಕೋರ್ಟ್ ನಲ್ಲಿ ದಾವಹಾಕಿಕೊಂಡಿದ್ದು 16 ½ ಗುಂಟೆ ತಮಗೆ ಬರುತ್ತದೆ ಎಂದು ಅದನ್ನು ಮಾರಾಟ ಮಾಡಲು ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಮಹದೇವಮ್ಮ ರವರ ಭಾಗಾಂಶ ಇಂತಿಷ್ಟು ಎಂದು ನ್ಯಾಯಾಲಯದಲ್ಲಿ ನಿಗದಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಇನ್ನೂ ತಿರ್ಮಾನವಾಗಿರಲಿಲ್ಲ ತಮ್ಮ ಭಾಗಕ್ಕೆ ಬರುತ್ತದೆ ಎಂದು ಕರಾರು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ಕರಾರು ಪತ್ರವನ್ನು ಬರೆದು, ಸಹಿ ಮಾಡಿ ಮಾತುಕತೆ ಎಲ್ಲ ಮುಗಿಯುವುದರಿಲ್ಲಿ ಸಂಜೆ 5.30ಗಂಟೆ ಆಗಿತ್ತು. ನಾನು ಹೇಳುವಂತೆ ನಿಪಿ 1 ರಂತೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ ಮತ್ತು ನಾಮಕಾವಸ್ತೆಗೆ ನಿಪಿ 1 ಪತ್ರವನ್ನು ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ಕಾರಣದಿಂದಾಗಿ ನಿಪಿ 1 ದಾಖಲೆಯಲ್ಲಿ ಸ್ವತ್ತಿನ ವಿಸ್ತೀರ್ಣ ಮತ್ತು ಬಾಕಿ ಹಣದ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರವಾದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ನನ್ನ ಸ್ನೇಹಿತನಾದ ಕಾರಣ ಅವರಿಗೆ

ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3ನೇ ಪ್ರತಿವಾದಿಗಳು ನಿಪಿ 1 ಕರಾರು ಪತ್ರವಾಗಿದೆ ಎನ್ನುವ ಸಮಯದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ